ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ನಕ್ಸಲಿಯರ ಹಾವಳಿ

3417 (3904) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೆಲವು ಭಾಗಗಳಲ್ಲಿ ನಕ್ಸಲಿಯರ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದುವರೆಗೂ ಎಷ್ಟು ಜನ ನಕ್ಸಲಿಯರನ್ನು ಬಂದಿಸಲಾಗಿದೆ;

ಇ) ರಾಜ್ಯದಲ್ಲಿ ನಕ್ಸಲಿಯರ ಹಾವಳಿಯನ್ನು ಸಂಪೂರ್ಣವಾಗಿ ಅಳಿಸಿ ಹಾಕಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು.

ಆ) 4 ಜನರನ್ನು ಬಂದಿಸಲಾಗಿದೆ.

ಇ) ಎ) ರಾಜ್ಯದ ಗಡಿ ಪ್ರದೇಶದ ಪೊಲೀಸ್ ಠಾಣೆಗಳನ್ನು ಬಲಪಡಿಸಲಾಗಿದೆ.

ಬಿ) ಕಾಲಕಾಲಕ್ಕೆ ಸಮನ್ವಯ ಸಮಿತಿಗಳನ್ನು ಆಂಧ್ರಪ್ರದೇಶ ಪೊಲೀಸ್ ಅಧಿಕಾರಿಗಳೊಡನೆ ನಡೆಸಲಾಗುತ್ತಿದೆ.

ಸಿ) ಪಿ.ಡಬ್ಲ್ಯೂಜಿ. ಗುಂಪಿನ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಗುಪ್ತ ಮಾಹಿತಿ ಮತ್ತು ವರದಿ ಸಂಗ್ರಹಿಸಲಾಗುತ್ತಿದೆ.

ಡಿ) ಹಿರಿಯ ಅಧಿಕಾರಿಗಳ ಪಿ.ಡಬ್ಲ್ಯೂಜಿ. ಪೀಡಿತ ಗ್ರಾಮಗಳಿಗೆ ಕ್ರಮಬದ್ಧವಾಗಿ ಭೇಟಿ ನೀಡಿ, ಸದರಿ ಚಟುವಟಿಕೆಗಳನ್ನು ಪಡೆಯಲು ಪರಿವೀಕ್ಷಣೆ ನಡೆಸುತ್ತಿದ್ದಾರೆ.

ಇ) ಮಾಸ್ ಕಾಂಟ್ಯಾಕ್ಟ್ ಪ್ರೋಗ್ರಾಮಗಳ ಮೂಲಕ ಜನರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ಎಫ್) ಬೇರೆ ಇಲಾಖೆಯ ಅಧಿಕಾರಿಗಳೂ ಸಹ ಹಳ್ಳಿಗಳಿಗೆ ಹೋಗಿ ಪ್ರಗತಿಪರ ಕಾರ್ಯಗಳ ಬಗ್ಗೆ ನಿಗಾವಹಿಸುತ್ತಿದ್ದಾರೆ.

ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ

3419 (3536) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಇಂಧನ ರಾಜ್ಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999–2000 ನಂತರ ರಾಜ್ಯದಲ್ಲಿ ವಿದ್ಯುತ್ ಶುಲ್ಕವನ್ನು ಎಷ್ಟು ಬಾರಿ ಹೆಚ್ಚಿಸಲಾಯಿತು;

ಆ) ಎಷ್ಟೆಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ;

ಇ) ಗೃಹ ಬಳಕೆ, ಸರ್ವ ವಿದ್ಯುತ್ ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿ ಬಳಕೆಯ ವಿದ್ಯುತ್ ದರದ ಹೆಚ್ಚಳದ ಶೇಕಡವಾರು ವಿವರ ನೀಡುವುದು.

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಅ ಮತ್ತು ಆ ಕರ್ನಾಟಕ ವಿದ್ಯುತ್ ಸುಧಾರಣೆ ಕಾಯಿದೆ 1999ರ ಪ್ರಕಾರ, ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಆಯೋಗಕ್ಕೆ ವಿದ್ಯುತ್ ದರಗಳ ಪರಿಷ್ಕರಣೆಯ ಅಧಿಕಾರವನ್ನು ನೀಡಲಾಗಿರುತ್ತದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ದರ ಪರಿಷ್ಕರಣದ ಆದೇಶಗಳಂತೆ 1999–2000ನೇ ಸಾಲಿನಿಂದ ಇಲ್ಲಿಯವರೆಗೆ ಮೂರು